# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಸ.ಆ(ಜಾ)/ಪಿಆರ್/ /15-16

ಸಹಾಯಕ ಆಯುಕ್ತರವರ ಕಛೇರಿ,
ಜಾಹೀರಾತು ವಿಭಾಗ, ಎನ್.ಆರ್.ಚೌಕ,
ಬೆಂಗಳೂರು-02, ದಿನಾಂಕ:14.03.2016.

ಗೆ.
ಮಾನ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಅವಶ್ಯ ಆಡಳಿತ ಸುಧಾರಣಾ
ಕ್ರಮಗಳ ಬಗ್ಗೆ 6ನೇ ವರದಿ

## ಆಂತರಿಕ ಕಛೇರಿ ಟಿಪ್ಪಣಿ

ವಿಷಯ: **ಜಾಹೀರಾತು ಶಾಖೆಯ ಕಂಪ್ಯೂಟರ್‌ನಲ್ಲಿ ಸಿಬ್ಬಂಧಿಗಳ/ಮೇಲಾಧಿಕಾರಿಗಳ ಅನುಮತಿ ಪಡೆಯದೆ ಅನಧಿಕೃತವಾಗಿ Team Viewer ಎಂಬ Spy Softwareನ್ನು ಅಳವಡಿಸಿ ಕಛೇರಿ ಮಾಹಿತಿಗಳನ್ನು ನಿಯಮಿತವಾಗಿ ಸೋರಿಕೆಗೊಳಿಸಬಹುದಾಗಿರುವ ವಿಷಯವನ್ನು C.I.D ಯಿಂದ ತನಿಖೆಗೊಳಪಡಿಸಿ ಕಾನೂನು ಕ್ರಮ ಜರುಗಿಸುವ ಬಗ್ಗೆ.**

ಉಲ್ಲೇಖ: 1. ಕಂಪ್ಯೂಟರ್ ಆಪರೇಟರ್‌ರವರ ವರದಿ ದಿನಾಂಕ:10.03.2016
2. ಸಹಾಯಕ ಕಂದಾಯ ಅಧಿಕಾರಿಯವರ ಟಿಪ್ಪಣಿ ದಿನಾಂಕ:10.03.2016.
3. ಸಹಾಯಕ ಆಯುಕ್ತರು(ಜಾ)ರವರ 5ನೇ ವರದಿ ದಿನಾಂಕ:23.12.2016.

ಮೇಲ್ಕಂಡ ವಿಷಯದ ಬಗ್ಗೆ, ದಿನಾಂಕ:10.03.2016ರಂದು ಕಛೇರಿ ಕಂಪ್ಯೂಟರ್‌ನಿಂದ ಮಾಹಿತಿ ಸೋರಿಕೆಯಾಗುತ್ತಿರುವ ಬಗ್ಗೆ ಪ್ರತ್ಯಕ್ಷದರ್ಶಿಯಾದ ಸಾರ್ವಜನಿಕರೊಬ್ಬರು ಸಹಾಯಕ ಆಯುಕ್ತರು(ಜಾ) ರವರಿಗೆ ನೀಡಿದ ಮಾಹಿತಿಯಂತೆ ಕಂಪ್ಯೂಟರ್ ಆಪರೇಟರ್ ಆಗಿರುವ ಶ್ರೀಮತಿ ವೀಣಾರವರನ್ನು ವಿಚಾರಿಸಲಾಗಿ, ಸದರಿಯವರು ಉಲ್ಲೇಖ(1) ರಂತೆ ನೀಡಿರುವ ಹೇಳಿಕೆಯಂತೆ ತಾನು ನಿರ್ವಹಿಸುತ್ತಿರುವ ಕಂಪ್ಯೂಟರ್‌ನಲ್ಲಿ ಯಾರೋ Team Viewer ಎಂಬ ತಂತ್ರಜ್ಞಾನವನ್ನು ಅಳವಡಿಸಿ ಹೈಕ್ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಹಾಗೆಯೇ ಕಛೇರಿಯ ಸಹಾಯಕ ಕಂದಾಯ ಅಧಿಕಾರಿಯವರು ಉಲ್ಲೇಖ(2)ರ ಟಿಪ್ಪಣಿಯಂತೆ Team Viewer ಬಗ್ಗೆ ಮಾಹಿತಿ ನೀಡಿರುತ್ತಾರೆ. ಸದರಿ ವಿಷಯವನ್ನು ಪರಿಶೀಲಿಸಲಾಗಿ ಸದರಿ Team Viewer ಅಳವಡಿಸಿದವರ್ಯಾರು? ಯಾವ ಉದ್ದೇಶಕ್ಕೆ ಅಳವಡಿಸಿರುತ್ತಾರೆ? ಮತ್ತು ಜಾಹೀರಾತು ಶಾಖೆಯ ಕಂಪ್ಯೂಟರಿನಿಂದ ಯಾವ ಯಾವ ಮಾಹಿತಿಯನ್ನು ಯಾರು ಯಾರು ಅನಧಿಕೃತವಾಗಿ ಸೋರಿಕೆ ಮಾಡಿರುತ್ತಾರೆ. ಸದರಿ ಮಾಹಿತಿಯನ್ನು ಪಡೆದುಕೊಂಡಿರುವ ಅತಿಥೇಯ ಕಂಪ್ಯೂಟರ್‌ನ್ನು ಯಾರು ಎಲ್ಲಿಂದ ನಿರ್ವಹಿಸಿರುತ್ತಾರೆ. ಹಾಗೂ ಮಾಹಿತಿ ಸೋರಿಕೆ ಹಿಂದೆ ಯಾವ ಯಾವ ಮಾಫಿಯಾ ಕೈವಾಡ ಇದೆ ಎಂಬ ಬಗ್ಗೆ ತನಿಖೆಗೆ ಒಳಪಡಿಸಿ ಸಂಬಂಧಪಟ್ಟವರ ಮೇಲೆ ಕಾನೂನು ರೀತ್ಯಾ ಕ್ರಮವಹಿಸಬೇಕಾಗುತ್ತದೆ. ಹಾಗೆಯೇ ಈ ತಕ್ಷಣದಿಂದ ಸದರಿ ತಂತ್ರಜ್ಞಾನವನ್ನು ನಿಷ್ಕ್ರಿಯಗೊಳಿಸಬೇಕಾಗುತ್ತದೆ.

-2-

ಸಹಾಯಕ ಕಂದಾಯ ಅಧಿಕಾರಿ
ಜಾಹೀರಾತು ವಿಭಾಗ
ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ನಿಯಮಿತವಾಗಿ ಈ ರೀತಿ ಮಾಹಿತಿ ಸೋರಿಕೆಯಾಗಿರುವುದನ್ನು ಹಾಗೂ ಇದರಲ್ಲಿ ಯಾರ ಯಾರ ಕೈವಾಡವಿದೆಯೆಂಬುದನ್ನು ಸಹ ತನಿಖೆಗೊಳಪಡಿಸಿದ್ದಲ್ಲಿ ಸತ್ಯಾಂಶ ಹೊರಬರಬಹುದಾಗಿದೆ. ಈಗಾಗಲೇ ಜಾಹೀರಾತುವಿನಿಂದ 2000 ಕೋಟಿ ಆದಾಯ ನಷ್ಟ ವಾಗಿರುವ ವಿಷಯವನ್ನು ಸರ್ಕಾರವು ಸಿ.ಐ.ಡಿ. ತನಿಖೆಗೊಳಪಡಿಸಿರುವ ಬಗ್ಗೆ ಉಲ್ಲೇಖ 3ರಂತೆ ಆದೇಶಿಸಲಾಗಿರುತ್ತದೆ.

ಹಲವಾರು ವರ್ಷಗಳಿಂದ ಕೇಂದ್ರ ಕಛೇರಿ ಜಾಹಿರಾತು ವಿಭಾಗದಿಂದ ಹಿಂದಿನ ಸುಮಾರು 10 ವರ್ಷಗಳಿಂದ ಬಾಕಿ ತೆರಿಗೆ ವಸೂಲಿ ಮಾಡದೇ ಸುಮಾರು 30 ಕೋಟಿ ಆದಾಯ ನಷ್ಟವಾಗಿರುವ ವಿಷಯವನ್ನು B.M.T.F. ನಿಂದ ತನಿಖೆಗೊಳಪಡಿಸುವ ಬಗ್ಗೆ ಉಲ್ಲೇಖ(3) ರಂತೆ ವಿನಂತಿಸಲಾಗಿತ್ತು. ಆದರೆ ಈ ಬಗ್ಗೆ ಯಾವುದೇ ತನಿಖೆಯಾಗಿರುವುದಿಲ್ಲ. ಈ ಮಧ್ಯೆ ಕಳೆದ 10 ವರ್ಷಗಳಿಂದ ಕೇಂದ್ರ ಕಛೇರಿ ಜಾಹೀರಾತು ವಿಭಾಗದಿಂದ ತೆರಿಗೆ ವಸೂಲಿ ಮಾಡದೇ ಇರಲು ಕಾರಣಕರ್ತರಾಗಿರುವವರು ಈ ಮೇಲಿನ Spy Softwareನ್ನು ತಂತ್ರಜ್ಞಾನ ಅಳವಡಿಸುವಲ್ಲಿ ಅವರ ಪಾತ್ರವಿದೆಯೇ ಎಂಬುದನ್ನು ಸಹ ತನಿಖೆಗೊಳಪಡಿಸಬೇಕಾಗಿದೆ. Team Viewer Spy Softwareನ್ನು ಖಾಸಗಿ ಉಪಯೋಗಕ್ಕೆ ಬಳಸಬಹುದಾಗಿದ್ದರೂ, ಸರ್ಕಾರಿ ಕಛೇರಿಗಳಲ್ಲಿ Team Viewer ಬಳಕೆಯಿಂದ ಆಡಳಿತ ಮಟ್ಟದಲ್ಲಿ ತೆಗೆದುಕೊಳ್ಳುವ ವಿವಿಧ ನಿರ್ಧಾರಗಳನ್ನು ಅಳವಡಿಸುವ ಮೊದಲೇ ಅಂತಹ ನಿರ್ಧಾರಗಳನ್ನು Team Viewer ಬಳಸಿ ಮಾಹಿತಿಯನ್ನು ತಿರುಚಿ ಮುಂಚಿತವಾಗಿ ಒತ್ತಡ ತಂತ್ರ ಬಳಸಿ ಆಡಳಿತ ನಿರ್ಧಾರಗಳನ್ನು ಬದಲಿಸುವ ಸಾಧ್ಯತೆಗಳನ್ನು ಈ ಕೆಳಗಿನಂತೆ ಗಮನಿಸಬಹುದಾಗಿದೆ.

1. ಹಣಕಾಸು ಇಲಾಖೆಯ ಪ್ರಾಮುಖ್ಯವಾದ ಬಜೆಟ್ ಸಾಧ್ಯತೆಯನ್ನು ಬಜೆಟ್ ಘೋಷಣೆ ಮುಂಚಿತವಾಗಿ ಸೋರಿಕೆ ಮಾಡಬಹುದಾಗಿದೆ. **ಈಗಾಗಲೇ ಬಜೆಟ್ ಘೋಷಣೆ ಮುಂಚಿತವಾಗಿ ಮಾಹಿತಿ ಮಾಧ್ಯಮಗಳಲ್ಲಿ ಪ್ರಕಟಣೆಯಾಗಿರುವುದು ಗಮನಕ್ಕೆ ಬಂದಿರುತ್ತದೆ.**
2. ಯಾವುದೇ ಸಿಬ್ಬಂದಿಗಳ ಮೇಲೆ ಶಿಸ್ತು ಪ್ರಕರಣಕ್ಕೆ ಪ್ರಸ್ತಾವನೆ ಸಲ್ಲಿಸಿದಲ್ಲಿ ಅದನ್ನು ಕಾರ್ಯಗತಗೊಳಿಸುವ ಮುಂಚಿತವಾಗಿ ಒತ್ತಡ ತಂತ್ರ/ಧರಣಿ/ ಮುಷ್ಕರ ಮಾಡಿಸಬಹುದಾಗಿದೆ.
3. ಮಾನ್ಯ ಆಯುಕ್ತರು/ವಿಶೇಷ ಆಯುಕ್ತರಗಳ ಕಛೇರಿಗಳಲ್ಲಿ ಇಂತಹ Software ಅಳವಡಿಸಿರುವ ಬಗ್ಗೆ ತೆಗೆದು ಕೊಳ್ಳುವ ಯಾವುದೇ ರೀತಿಯ Policey ತೀರ್ಮಾನಗಳನ್ನು ಬಾಹ್ಯ ಒತ್ತಡ ತಂತ್ರ ಬಳಸಿ ನಿಷ್ಕ್ರೀಯೆಗೊಳಿಸುಲು/ಬದಲಿಸಲು ಒತ್ತಡ ಹೇರುವ ಸಾಧ್ಯತೆಗಳಿರುತ್ತವೆ.
4. ಇಂಜಿನಿಯರಿಂಗ್ ವಿಭಾಗದಲ್ಲಿನ ಗೌಪ್ಯ ಟೆಂಡರ್ ಮಾಹಿತಿಗಳನ್ನು ಮುಂಚಿತವಾಗಿ ಬಹಿರಂಗ ಪಡಿಸಬಹುದಾಗಿದೆ. ಹಾಗೂ ಪಾಲಿಕೆಯ ಹಿತಾಸಕ್ತಿ ವಿರುದ್ಧವಾಗಿ ವಿವಿಧ ಷಡ್ಯಂತ್ರಗಳನ್ನು ರೂಪಿಸಬಹುದಾಗಿದೆ.
5. ಪಾಲಿಕೆಯ ವಿವಿಧ ಶಾಖೆಗಳಲ್ಲಿ ವಿವಿಧ ರೀತಿಯ ಅಂಕಿ ಅಂಶಗಳನ್ನು ದೂರದಲ್ಲಿರುವ ಕಂಪ್ಯೂಟರ್ ಮೂಲಕ ಆಮದು ಮಾಡಿಕೊಂಡು ಸದರಿ ಅಂಕಿ ಅಂಶಗಳನ್ನು ತಿದ್ದುಪಡಿ ಮಾಡಿ ಪಾಲಿಕೆಯು ದಿಕ್ಕು ತಪ್ಪಿಸಬಹುದಾಗಿದೆ. ಉದಾಹರಣೆ ಮೆ॥ ಆಲೇಶ್ ಕಲೆಕ್ಷನ್ಸ್ ಎಂಬ ಜಾಹೀರಾತು ಸಂಸ್ಥೆ ಪಾಲಿಕೆಗೆ 2.59 ಕೋಟಿ ತೆರಿಗೆ/ದಂಡ ಬಾಕಿ ಪಾವತಿಸುವ ಬಗ್ಗೆ. ಈ ಕಛೇರಿಯಲ್ಲಿ ಎಲ್ಲಾ ದಾಖಲೆಗಳಿದ್ದು, ಕಪ್ಪು ಪಟ್ಟಿಗೆ ಸೇರಿಸಲು ಪ್ರಸ್ತಾವನೆ ಚಾಲ್ತಿಯಲ್ಲಿದ್ದಾಗಲೇ ಮಾನ್ಯ ಆಡಳಿತ ಪಕ್ಷದ ನಾಯಕರಿಗೆ ಮಾರ್ಚ್ ಮೊದಲನೇ ವಾರದಲ್ಲಿ ನೀಡಲಾದ ಕಂಪ್ಯೂಟರ್ ಪ್ರತಿಗಳ ಮಾಹಿತಿಯಂತೆ ಮೆ॥ ಆಲೇಶ್ ಕಲೆಕ್ಷನ್ಸ್ ಎಂಬ ಜಾಹೀರಾತು ಸಂಸ್ಥೆಯವರು ಕೇವಲ 43 ಲಕ್ಷ ಮಾತ್ರ ಪಾವತಿಸಲು ಬಾಕಿ ಇದೆ ಎಂಬ ಮಾಹಿತಿ ನೀಡಿರುವುದು ಸಂಶಯಕ್ಕೆ ಎಡೆಯಾಗಿದೆ.

ಈ ನಿಟ್ಟಿನಲ್ಲಿ ಪಾಲಿಕೆಯ ಬೇರೆ ಬೇರೆ ಶಾಖೆಗಳ ಕಂಪ್ಯೂಟರ್‌ಗಳಲ್ಲಿ ಸಹ ಈ ರೀತ್ಯಾ ಗೂಢಚರ್ಯ ತಂತ್ರಜ್ಞಾನ ಅಳವಡಿಸಬಹುದಾಗಿರುವುರಿಂದ ಹಾಗೂ ಇಂತಹ ವಿಷಯಗಳ ಬಗ್ಗೆ C.I.D. ಇಲಾಖೆಯ Cyber Crime ವಿಭಾಗದಿಂದ ತನಿಖೆಗೊಳಪಡಿಸಿದ್ದಲ್ಲಿ Cyber Crime ವಿಭಾಗದ ನುರಿತ ತನಿಖಾಧಿಕಾರಿಗಳಿಂದ ಸತ್ಯಾಂಶವನ್ನು ಹೊರತರಬಹುದಾಗಿರುತ್ತದೆ. ಹಾಗೂ Team weare ತಂತ್ರಜ್ಞಾನವನ್ನು ತಕ್ಷಣ ನಿಷ್ಕ್ರಿಯಗೊಳಿಸಿ ಬಿ.ಬಿ.ಎಂ.ಪಿ ಗೌಪ್ಯ ಮಾಹಿತಿಯನ್ನು ಸಂರಕ್ಷಿಸುವ ಬಗ್ಗೆ ತುರ್ತು ಆದೇಶಕ್ಕಾಗಿ ಉಲ್ಲೇಖ(1) ಮತ್ತು (2)ರ ಪ್ರತಿಗಳೊಂದಿಗೆ ಮಾನ್ಯರ ಅವಗಾಹನೆಗೆ ಸಲ್ಲಿಸುತ್ತಿದೆನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಶ್ರೀ.ಕೆ.ಮಥಾಯಿ, ಭಾ.ಆ.ಸೇ) 14/03/16

ಸಹಾಯಕ ಆಯುಕ್ತರು(ಜಾಹೀರಾತು)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು :

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತಶಾಖೆಗೆ ಗೌರವಪೂರ್ವಕ ಸಲ್ಲಿಸಿದೆ.
2. ಪೂಜ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತಶಾಖೆಗೆ ಗೌರವಪೂರ್ವಕ ಸಲ್ಲಿಸಿದೆ.
3. ಮಾನ್ಯ ಆಯುಕ್ತರ ಅವಗಾಹನೆಗೆ ತರಲು ಆಪ್ತಶಾಖೆಗೆ ಗೌರವಪೂರ್ವಕ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು(ಜಾಹೀರಾತು)ರವರ ಅವಗಾಹನೆಗಾಗಿ ಗೌರವಪೂರ್ವಕ ಸಲ್ಲಿಸಿದೆ.
5. ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
6. ಮಾನ್ಯ ವಿಶೇಷ ಆಯುಕ್ತರು(ಘನತ್ಯಾಜ್ಯ ಮತ್ತು ಮಾರುಕಟ್ಟೆ) ರವರ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
7. ಮಾನ್ಯ ವಿಶೇಷ ಆಯುಕ್ತರು(ಹಣಕಾಸು) ರವರ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
8. ಮಾನ್ಯ ಅಪರ ಆಯುಕ್ತರು(ಆಡಳಿತ) ರವರ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
9. ಕೌನ್ಸಿಲ್ ಕಾರ್ಯದರ್ಶಿಗಳ ರವರ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
10. ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
11. ಕಾನೂನು ಕೋಶದ ಮುಖ್ಯಸ್ಥರವರ ಮಾಹಿತಿಗಾಗಿ ಗೌರವಪೂರ್ವಕ ಸಲ್ಲಿಸಿದೆ.
12. ಕಛೇರಿ ಕಡತಕ್ಕೆ.

ಸ್ವೀಕೃತಿ ಕೇಂದ್ರದ ಅಧಿಕಾರಿ
ಜಾಹೀರಾತು ವಿಭಾಗ
ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ರವರಿಗೆ,
ಸಹಾಯಕ ಆಯುಕ್ತರು (ಜಾಹೀರಾತು)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ದಿನಾಂಕ:10.03.2016

ಮಾನ್ಯರೆ,

ವಿಷಯ:- ಕಛೇರಿಯ ಗಣಕಯಂತ್ರದಲ್ಲಿನ ಮಾಹಿತಿಯು ಹೈಕ್ ಆಗುತ್ತಿರುವ ಬಗ್ಗೆ.

*/*/*/*/*

ಶ್ರೀಮತಿ.ವೀಣಾ ಗಣಕಯಂತ್ರ ನಿರ್ವಾಹಕರು ಆದ ನಾನು ಈ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ದಿನಾಂಕ:09.03.2016 ರಂದು ಸಂಜೆ 5-15ರ ಸಮಯದಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಗಣಕಯಂತ್ರದಲ್ಲಿ ಹೈಕ್ ಆಗುತ್ತಿರುವುದು ಈ ಬಗ್ಗೆ ಗಣಕಯಂತ್ರದಲ್ಲಿ Team Viewer ಸಾಫ್ಟವೇರ್ ಅಳವಡಿಸಿರುವುದು ಕಂಡುಬಂದಿರುತ್ತದೆ. ಈ ವಿಷಯವನ್ನು ಕಛೇರಿಯಲ್ಲಿನ ಶ್ರೀ.ಎಂ.ದಾಸಪ್ಪ, ಪ್ರ.ದ.ಸ ಹಾಗೂ ವ್ಯವಸ್ಥಾಪಕರ ಗಮನಕ್ಕೆ ತಂದಿರುತ್ತೇನೆ.

ವಂದನೆಗಳೊಂದಿಗೆ,

ಸಹಾಯಕ ಆಯುಕ್ತರು ಅಧಿಕಾರಿ
ಜಾಹೀರಾತು ವಿಭಾಗ
ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

ತಮ್ಮ ವಿಶ್ವಾಸಿ,
Veena
ಶ್ರೀಮತಿ.ವೀಣಾ.ಡಿ 10.03.16
(ಗಣಕಯಂತ್ರ ನಿರ್ವಾಹಕರು)

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಟಿಪ್ಪಣಿ ಹಾಳೆ

ವಿಷಯ ........................................ ಪುಟದ ಸಂಖ್ಯೆ - 3 -

........................................ ಕಡತದ ಸಂಖ್ಯೆ ........................................

| ಪಂಕ್ತಿಯ ಸಂಖ್ಯೆ | ಟಿಪ್ಪಣಿಗಳು ಮತ್ತು ಆಜ್ಞೆಗಳು |
|---|---|

ಕಂಡಿಕೆ 5ರಲ್ಲಿ ಸಹಾಯಕ ಆಯುಕ್ತರು ಪ್ರಸ್ತಾಪಿಸಿರುವಂತೆ ಈ ಕಛೇರಿಯ ಗಣಕ ಯಂತ್ರದಲ್ಲಿ **Team Viewer** ಸಾಫ್ಟ್‌ವೇರ್‌ನ್ನು ಅಳವಡಿಸಲಾಗಿದೆ ಎಂಬುದು ದಿನಾಂಕ:10.03.2015ರಂದು ಸಾರ್ವಜನಿಕರಿಂದ ತಿಳಿದು ಬಂದಿರುವುದಾಗಿ ತಿಳಿಸಿದ್ದು. ಈ ಕಛೇರಿಯ ಗಣಕಯಂತ್ರವನ್ನು ಸಾರ್ವಜನಿಕರು ಬಂದು ಪರಿಶೀಲಿಸಲು ಸಾಧ್ಯವಿದೆಯೇ? ಯಾರು ಆ ಸಾರ್ವಜನಿಕರು ಇವರಿಗೆ ಈ ಕಛೇರಿಯ ಗಣಕಯಂತ್ರದ ಬಗ್ಗೆ ಮಾಹಿತಿ ನೀಡಿದವರ್ಯಾರು? ಮಾಹಿತಿ ತಿಳಿದು ಬಂದಿರುವುದಿಲ್ಲ.

(7) ಈ ವಿಷಯದ ಬಗ್ಗೆ ಕಂಡಿಕೆ (5)ರಲ್ಲಿ ಕೋರಿರುವ ಮಾಹಿತಿಗೆ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

1. ಗಣಕಯಂತ್ರ ನಿರ್ವಾಹಕರಿಗೆ ದಿನಾಂಕ:09.03.2016 ರಂದು ಸಮಯ 5–15 ಗಂಟೆಯಲ್ಲಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಈ ರೀತಿ ಕಂಪ್ಯೂಟರ್ ಹ್ಯಾಕ್ ಆಗುತ್ತಿರುವ ಬಗ್ಗೆ ಮೌಖಿಕವಾಗಿ ನಂತರ ದಿನಾಂಕ:10.03.2016 ರಂದು ಲಿಖಿತವಾಗಿ ಗಣಕಯಂತ್ರ ನಿರ್ವಾಹಕರಾದ ಶ್ರೀಮತಿ.ಡಿ.ವೀಣಾ ರವರು ಮಾಹಿತಿ ನೀಡಿರುತ್ತಾರೆ.

2. ಗಣಕಯಂತ್ರ ನಿರ್ವಾಹಕರು ದಿನಾಂಕ:09.03.2016 ರಂದು ಕಛೇರಿಯ ವೇಳೆ ಮುಗಿಯುತ್ತಿದ್ದ ಸಮಯದಲ್ಲಿ ಮಾಹಿತಿ ನೀಡಿದ್ದು, ಅದರ ಬಗ್ಗೆ ತಮ್ಮ ಗಮನಕ್ಕೆ ತರುವ ಮುನ್ನವೇ ತಾವೇ ದಿನಾಂಕ:10.03.2016ರಂದು ಬೆಳಿಗ್ಗೆ ಪ್ರ.ದ.ಗು/ಗಣಕಯಂತ್ರ ನಿರ್ವಾಹಕರನ್ನು ತಾವು ವಿಚಾರಿಸಿರುತ್ತೀರಿ.

3. ದಿನಾಂಕ:10.03.2016ರಂದು ಈ ವಿಷಯ ಗ್ರಹಿಸಿದ ನಂತರ ಸದರಿ **Team Viewer** ಸಾಫ್ಟ್‌ವೇರ್‌ನಿಂದ ಗಣಕಯಂತ್ರದಲ್ಲಿ ಈ ಕಛೇರಿಗೆ ಸಂಬಂಧಿಸಿದಂತೆ ದಾಖಲು ಮಾಡುವ ಎಲ್ಲಾ ಮಾಹಿತಿಗಳನ್ನು ಇತರರು ವೀಕ್ಷಿಸಬಹುದಾಗಿದ್ದು, ಕಛೇರಿಯ ಗೌಪ್ಯ ಮಾಹಿತಿಗಳು ಸೋರಿಕೆಯಾಗುವ ಸಂಭವ ಇರುವುದರಿಂದ ಸದರಿ ಸಾಫ್ಟ್‌ವೇರ್ ಬಗ್ಗೆ ಮಾಹಿತಿ ತಂತ್ರಜ್ಞಾನದವರಿಗೆ ಪರಿಶೀಲನೆಗೊಳಪಡಿಸಿ, ಕಛೇರಿಯ ಮಾಹಿತಿಯನ್ನು ಸೋರಿಕೆಯಾಗದಂತೆ ಸಂರಕ್ಷಿಸಲು ಸದರಿ ಸಾಫ್ಟ್‌ವೇರ್‌ನ್ನು ಗಣಕಯಂತ್ರದಿಂದ ತೆಗೆದು ಹಾಕುವ ಸಂಬಂಧಪಟ್ಟ ಮಾಹಿತಿ ತಂತ್ರಜ್ಞಾನ ಸಲಹೆಗಾರರನ್ನು ಕೋರಲು ಕಂಡಿಕೆ (4)ರಲ್ಲಿ ತಮಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತಿದೆ.

4. ಸದರಿ ಅನಧಿಕೃತ ಸಾಫ್ಟ್‌ವೇರ್ ಅಳವಡಿಸಿರುವ ಬಗ್ಗೆ ಮಾಹಿತಿಯು ದಿನಾಂಕ:09.03.2016 ರಂದು ಗಣಕಯಂತ್ರ ಆಪರೇಟರ್ ರವರು ನೀಡಿದ ಮಾಹಿತಿಯಂತೆ ನಮಗೆ ತಿಳಿದು ಬಂದಿರುತ್ತದೆ. ವಿನಃ ಇಷ್ಟು ದಿವಸ ಅನಧಿಕೃತ ಸಾಫ್ಟ್‌ವೇರ್ ಬಗ್ಗೆ ಮಾಹಿತಿ ಇರುವುದಿಲ್ಲ. ಅಲ್ಲದೇ ಗಣಕಯಂತ್ರದ ಸಾಫ್ಟ್‌ವೇರ್ / ಹಾರ್ಡ್‌ವೇರ್ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದೇ ಇರುವುದರಿಂದ ನನ್ನ ಗಮನಕ್ಕೂ ಸಹ ಇಂದೇ ಈ ವಿಷಯದ ಮಾಹಿತಿ ಬಂದಿದ್ದು ಈ ಬಗ್ಗೆ ತಮ್ಮ ಗಮನಕ್ಕೆ ತರಲು ಸಾಧ್ಯವಾಗಿರುವುದಿಲ್ಲ.

ಸಹ ಕಂದಾಯ ಅಧಿಕಾರಿ
ಜಾಹೀರಾತು ವಿಭಾಗ
ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.

10/3/2016
ಸಹ ಕಂದಾಯ ಅಧಿಕಾರಿ (ಜಾಹೀರಾತು)

(8) ಸಹಾಯಕ ಆಯುಕ್ತರು ...